# ಬಿಲೀವರ್ಸ್ ಈಸ್ಟರ್ನ್ ಚರ್ಚ್

ವಿಶ್ವ ಪ್ರಧಾನ ಕಛೇರಿ, ಸಂತ ಥಾಮಸ್ ಸಮುದಾಯ,
ತಿರುವಲ್ಲ – 689103, ಕೇರಳ, ಭಾರತ

# ಕುರುಬನ ಪತ್ರ

ಅಕ್ಟೋಬರ್ – ನವೆಂಬರ್ 2025

**ನನ್ನ ಪ್ರೀತಿಯ ಕುರುಬರಿಗೆ ಮತ್ತು ಪವಿತ್ರ ಚರ್ಚ್‌ನ ಎಲ್ಲಾ ನಂಬಿಗಸ್ತರಿಗೆ**

ಒಬ್ಬನೇ ದೇವರಾದ, ತಂದೆ, ಮಗ ಮತ್ತು ಪವಿತ್ರಾತ್ಮನ ನಾಮದಲ್ಲಿ. ಆಮೆನ್ ✠

ನಿಮಗೆ ಬರೆಯುವುದು ಎಷ್ಟು ಸಂತೋಷ ಮತ್ತು ಸದವಕಾಶ ಎಂದು ಹೇಳುವ ಮೂಲಕ ನಾನು ಪ್ರಾರಂಭಿಸುತ್ತೇನೆ. ಈ ಪತ್ರಗಳು, ನಿಮ್ಮ ಆಧ್ಯಾತ್ಮೀಕ ತಂದೆಯಾಗಿ ಕಳುಹಿಸುತ್ತೇನೆ, ಅವು ಮುಖ್ಯ ಏಕಂದರೆ ಈ ಕಾಲದಲ್ಲಿ ನಮ್ಮ ಸಭೆಗಾಗಿ ದೇವರು ನನ್ನ ಹೃದಯದಲ್ಲಿ ಏನು ಇಟ್ಟಿದ್ದಾನೆ ಎಂಬುದನ್ನು ಹಂಚಿಕೊಳ್ಳಲು ಮತ್ತು ನಿಮ್ಮಲ್ಲಿ ಪ್ರತಿಯೊಬ್ಬರನ್ನು ನಾನು ಎಷ್ಟು ಗೌರವಿಸುತ್ತೇನೆ ಎಂಬುದನ್ನು ನಿಮಗೆ ನೆನಪಿಸಲು ಅವು ನನಗೆ ಅವಕಾಶ ಮಾಡಿಕೊಡುತ್ತವೆ. ಚರ್ಚ್‌ನ ಬಿಷಪ್‌ಗಳು ಮತ್ತು ಫಾದರ್‌ಗಳು ತಮ್ಮ ಮಂದೆಗೆ ಬರೆಯುವ ಅಭ್ಯಾಸವು ಕ್ರೈಸ್ತ ಧರ್ಮದ ಆರಂಭಿಕ ಶತಮಾನಗಳಿಂದ ಬಂದದ್ದು. ಈ ಪತ್ರಗಳಲ್ಲಿ ಹಲವು ಇಂದಿಗೂ ಸಂರಕ್ಷಿಸಲ್ಪಟ್ಟಿವೆ. ನಾವು ಪ್ರತ್ಯೇಕವಾಗಿಲ್ಲ ಅಥವಾ ಸ್ವತಂತ್ರರಲ್ಲ; ನಾವು ಕ್ರಿಸ್ತನ ದೇಹದ ಸದಸ್ಯರು ಎಂಬುದನ್ನು ಸಂಪೂರ್ಣವಾಗಿ ತಿಳಿದುಕೊಂಡು, ಸಭೆಯ ಐಕ್ಯತೆಯನ್ನು ಬಲಪಡಿಸಲು ಅವುಗಳನ್ನು ಬಳಸಲಾಗುತ್ತಿತ್ತು. ಸಭೆಯನ್ನು ಅನುಸರಿಸುವುದು ಎಂದರೆ ಅದು ಸಭೆಯ ಶಿರಸ್ಸಾಗಿರುವ ಕ್ರಿಸ್ತನನ್ನು ಅನುಸರಿಸುವುದು ಆಗಿದೆ.

ಸಂತ ಸಿಪ್ರಿಯನ್ ಹೇಳಿದಂತೆ:

*"ಸಭೆಯನ್ನು ತಾಯಿಯಾಗಿ ಹೊಂದಿಲ್ಲದವನಿಗೆ ದೇವರು ತಂದೆಯಾಗಿಲ್ಲ"*

<u>ಚರ್ಚ್ ಕ್ಯಾಲೆಂಡರ್</u>

ಏಕತೆಯ ಒಂದು ಪ್ರಮುಖ ಸಾಧನವೆಂದರೆ ಅದು ಚರ್ಚ್ ಕ್ಯಾಲೆಂಡರ್ ಆಗಿದೆ. ಇದು ನಮ್ಮ ಹೆಮ್ಮೆಯ ಮನಸ್ಸನ್ನು ವಿನಮ್ರಗೊಳಿಸುತ್ತದೆ ಮತ್ತು ಯೇಸು ಕ್ರಿಸ್ತನನ್ನು ದೈನಂದಿನ ಜೀವನದ ಕೇಂದ್ರ ಬಿಂದುವಾಗಿರುಸುತ್ತೆ. ಅದು ಸಮಯವನ್ನು – ದಿನಗಳು, ವಾರಗಳು ಮತ್ತು ತಿಂಗಳುಗಳನ್ನು – ಆಧ್ಯಾತ್ಮಿಕ ಕ್ಷೇತ್ರಕ್ಕೆ ಎತ್ತುವ ಮೂಲಕ ಪವಿತ್ರಗೊಳಿಸುತ್ತದೆ. ಈ ಕ್ಯಾಲೆಂಡರ್ ನಮಗೆ ಕ್ರಿಸ್ತನ ಜೀವನ ಮತ್ತು ರಕ್ಷಣೆಯ ಚರಿತ್ರೆಯ ಮೂಲಕ ಮಾರ್ಗದರ್ಶನ ನೀಡುತ್ತದೆ ಮತ್ತು ಹಬ್ಬಗಳು, ಉಪವಾಸಗಳು ಮತ್ತು ಸಂತರ ಸ್ಮರಣಾರ್ಥದ ಹಂಚಿಕೆಯ ಲಯದಲ್ಲಿ ನಮ್ಮನ್ನು ಒಂದುಗೂಡಿಸುತ್ತದೆ, ನಮ್ಮನ್ನು ಪವಿತ್ರತೆಗೆ ಕರೆದೊಯ್ಯುತ್ತದೆ.

ಸಂತ ಬೆಸಿಲ್ ದಿ ಗ್ರೇಟ್ ನಮಗೆ ನೆನಪಿಸುವಂತೆ:

*"ಸಭೆಯು ಉಪವಾಸ ಮತ್ತು ಹಬ್ಬಗಳನ್ನು ನೇಮಿಸುವುದು ನಮಗೆ ಹೊರೆಯಾಗಲು ಅಲ್ಲ, ಬದಲಾಗಿ ನಮ್ಮ ಆತ್ಮಗಳಿಗೆ ತರಬೇತಿ ನೀಡಲು ಮತ್ತು ನಮ್ಮ ಹೃದಯಗಳನ್ನು ದೇವರ ಕಡೆಗೆ ನಿರ್ದೇಶಿಸುವುದು."*

ಸಂತ ಜಾನ್ ಕ್ರಿಸೊಸ್ಟೊಮ್ ನಮ್ಮನ್ನು ಮತ್ತಷ್ಟು ಪ್ರೋತ್ಸಾಹಿಸುತ್ತಾರೆ:

*"ಸಭೆಯು ನೇಮಿಸಿದ ಹಬ್ಬಗಳನ್ನು ನಾವು ನಿರ್ಲಕ್ಷಿಸಬಾರದು, ಏಕೆಂದರೆ ಅವುಗಳಲ್ಲಿ ನಾವು ಬೋಧನೆ ಮತ್ತು ಆಧ್ಯಾತ್ಮಿಕ ಪೋಷಣೆಯನ್ನು ಪಡೆಯುತ್ತೇವೆ."*

ಆದುದರಿಂದ, ನನ್ನ ಪ್ರಿಯರೇ, ದೇವರ ಮೇಲೆ ಕೇಂದ್ರಿಕೃತ ಜೀವನವನ್ನು ನಡೆಸಲು ಚರ್ಚ್ ಕ್ಯಾಲೆಂಡರ್ ಅನ್ನು ಅಳವಡಿಸಿಕೊಳ್ಳಲು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ.

ಹೊಸ ಲಿಟರ್ಜಿಕಲ್ ವರ್ಷ

ಬಿಲೀವರ್ಸ್ ಈಸ್ಟರ್ನ್ ಚರ್ಚ್ 2 ನವೆಂಬರ್ 2025 ರಂದು ಹೊಸ ಲಿಟರ್ಜಿಕಲ್ ವರ್ಷವನ್ನು ಪ್ರವೇಶಿಸಲು ಸಿದ್ಧತೆ ನಡೆಸುತ್ತಿದೆ. ಹೊಸ ಲಿಟರ್ಜಿಕಲ್ ವರ್ಷದ ಚರ್ಚ್ ಕ್ಯಾಲೆಂಡರ್ ಮತ್ತು ಲೆಕ್ಷನರಿಯು ನಿಮ್ಮ ವೈಯಕ್ತಿಕ ಪ್ರತಿಯನ್ನು ಪಡೆಯಲು ನಿಮಗೆ ಲಭ್ಯವಿರುತ್ತದೆ.

ನಂಬಿಗಸ್ತರಿಗೆ ಸೂಚನೆಗಳು

- ಅದನ್ನು ಕೇಳಿರಿ: ನಿಮ್ಮ ಪ್ಯಾರಿಷ್ ಯಾಜಕರಿಂದ ಒಂದು ಪ್ರತಿಯನ್ನು ಕೇಳಿರಿ. ನಿಮ್ಮ ಕುಟುಂಬದಲ್ಲಿ ಕನಿಷ್ಠ ಒಂದು ಪ್ರತಿ ಇದೆಯೇ ಎಂದು ಖಚಿತಪಡಿಸಿಕೊಳ್ಳಿ, ಮತ್ತು ಅದನ್ನು ನಿಮ್ಮ ಮನೆಯಲ್ಲಿ ಎಲ್ಲರೂ ನೋಡಬಹುದಾದ ಒಂದು ಪ್ರಮುಖ ಸ್ಥಳದಲ್ಲಿ ಇಡಿರಿ.

- ಅದನ್ನು ಓದಿರಿ: ನಿಮ್ಮ ಕುಟುಂಬದೊಂದಿಗೆ ಕ್ಯಾಲೆಂಡರ್ ಅನ್ನು ಪರಿಶೀಲಿಸಿರಿ. ಈಸ್ಟರ್, ಗ್ರೇಟ್ ಲೆಂಟ್ ಮತ್ತು ಇತರ ಪ್ರಮುಖ ಅವಧಿಗಳಂತಹ ಹಬ್ಬಗಳನ್ನು ಮತ್ತು ಉಪವಾಸಗಳ ದಿನಾಂಕಗಳನ್ನು ಗಮನಿಸಿರಿ, ಇದರಿಂದ ನೀವು ಅವುಗಳನ್ನು ಸರಿಯಾಗಿ ಆಚರಿಸಬಹುದು.

- ಅದರೊಂದಿಗೆ ಯೋಜನೆ ಮಾಡಿರಿ: ನಮ್ಮ ಸಭೆಯಲ್ಲಿ ಗ್ರೇಟ್ ಲೆಂಟ್ ಒಂದು ಮಹತ್ವದ ಅವಧಿಯಾಗಿದೆ. ಪ್ಯಾರಿಷ್‌ನ ಎಲ್ಲಾ ಪ್ರಾರ್ಥನೆಗಳು ಮತ್ತು ಸೇವೆಗಳಿಗೆ ಹಾಜರಾಗಲು ಆದ್ಯತೆ ನೀಡಿರಿ. ಉಪವಾಸ ಪದ್ಧತಿಯನ್ನು ಅನುಸರಿಸಿರಿ–ಮಾಂಸಾಹಾರವನ್ನು ತಪ್ಪಿಸಿರಿ, ಫೋನ್ ಬಳಕೆ ಅಥವಾ ಅನಗತ್ಯ ಹಣ ಮತ್ತು ಸಮಯವನ್ನು ವ್ಯರ್ಥ ಮಾಡುವುದನ್ನು ಮಿತಿಗೊಳಿಸಿ ಮತ್ತು ನೀವು ಉಳಿಸಿದ್ದನ್ನು ದಾನಕ್ಕಾಗಿ ಬಳಸಿರಿ. ಈ 40 ದಿನಗಳ ಆಧ್ಯಾತ್ಮಿಕ ಬೆಳವಣಿಗೆಗೆ ಸಂಪೂರ್ಣ ಗಮನ ನೀಡಲು ಇತರ ಬದ್ಧತೆಗಳನ್ನು ಏರ್ಪಡಿಸಿರಿ. ಯಾವುದಾದರೂ ಭಾಗದಲ್ಲಿ ಸಹಾಯದ ಅಗತ್ಯವಿರುವುದಾದರೆ ನಿಮ್ಮ ಪ್ಯಾರಿಷ್ ಯಾಜಕರಿಂದ ಮಾರ್ಗದರ್ಶನವನ್ನು ಪಡೆಯಿರಿ.

- ಇದನ್ನು ಕಳುಹಿಸಿರಿ: ಚರ್ಚ್ ಕ್ಯಾಲೆಂಡರ್‌ನ್ನು ಅನುಸರಿಸುವ ಮಹತ್ವವನ್ನು ನಿಮ್ಮ ಮಕ್ಕಳಿಗೆ ಕಲಿಸಿರಿ. ಒಂದು ವೇಳೆ ಅವರು ಅಧ್ಯಯನ ಮಾಡಲು ಅಥವಾ ಕೆಲಸಮಾಡಲು ದೂರದಲ್ಲಿದ್ದರೂ ಸಹ, ಅದನ್ನು ಗಮನಿಸಲು ಅವರನ್ನು ಪ್ರೋತ್ಸಾಹಿಸಿರಿ. ಮಕ್ಕಳು ನಮ್ಮನ್ನು ನೋಡಿ ಕಲಿಯುತ್ತಾರೆ, ಆದುದರಿಂದ ಪೋಷಕರು ಮತ್ತು ಹಿರಿಯರು ಮಾದರಿಯಾಗಿ ಮುನ್ನಡೆಯಬೇಕು. ಈ ಜೀವನ ವಿಧಾನವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದು ದೇವರು ನಮಗೆ ಕೊಟ್ಟಿರುವ ಜವಾಬ್ದಾರಿಯಾಗಿದೆ.

ಯಾಜಕರಿಗೆ ಸೂಚನೆಗಳು

- ಕುರುಬರಾಗಿರಿ: ಚರ್ಚ್ ಕ್ಯಾಲೆಂಡರ್‌ನ್ನು ಅನುಸರಿಸಲು ನಿಮ್ಮ ಪ್ಯಾರಿಷ್‌ಗೆ ನಿಧಾನವಾಗಿ ಮಾರ್ಗದರ್ಶನ ನೀಡಿರಿ. ಮಾದರಿಯಿಂದ ಮುನ್ನಡೆಸಿರಿ, ಯಾಕೆಂದರೆ ನಿಮ್ಮ ಪ್ಯಾರಿಷ್‌ನ ಸದಸ್ಯರು ನೀವು ಮಾಡುವುದನ್ನು ನೋಡಿ ಅನುಸರಿಸುತ್ತಾರೆ.

- ಕ್ಯಾಲೆಂಡರ್‌ನ್ನು ಕಟ್ಟುನಿಟ್ಟಾಗಿ ಅನುಸರಿಸಿರಿ: ಅನುಕೂಲಕ್ಕಾಗಿ ಅಥವಾ ಇನ್ನಾವುದೇ ಕಾರಣಕ್ಕಾಗಿ ಯಾವುದೇ ಹಬ್ಬಗಳು, ಉಪವಾಸಗಳು ಅಥವಾ ಸ್ಮರಣಾರ್ಥಗಳನ್ನು ತಪ್ಪಿಸಿಕೊಳ್ಳಬೇಡಿ ಅಥವಾ ನಿರ್ಲಕ್ಷಿಸಬೇಡಿ. ಪವಿತ್ರ ಸಿನೊಡ್ ನಿರ್ದೇಶಿಸಿದಂತೆ ಸಭೆಯ ಪ್ರತಿಯೊಂದು ಕಾರ್ಯಕ್ರಮಕ್ಕೆ ಅಗತ್ಯವಿರುವ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಭೆಯ ಪ್ರಧಾನ ಕಛೇರಿಯಿಂದ ಒದಗಿಸಲಾದ ಕ್ಯಾಲೆಂಡರ್ ಮತ್ತು ಪ್ರಾರ್ಥನೆಯನ್ನು ಅನುಸರಿಸಿರಿ.

- ಕಲಿಯಲು ಉತ್ಸುಕರಾಗಿರಿ: ಒಂದು ವೇಳೆ ನಿಮಗೆ ತಿಳಿಯದ ವಿಷಯವು ಏನಾದರೂ ಇದ್ದರೆ, ನಿಮ್ಮ ಡಯೋಸಿಸನ್ ಬಿಷಪ್ ಮತ್ತು/ ಅಥವಾ ಡಯೋಸಿಸನ್ ವಿಕಾರ್ ಅವರಿಂದ ವಿನಮ್ರವಾಗಿ ಮಾರ್ಗದರ್ಶನ್ ಪಡೆಯಿರಿ. ನಿಮಗೆ ಈಗಾಗಲೇ ತಿಳಿದಿರುವುದರಲ್ಲಿ ಎಂದಿಗೂ ತೃಪ್ತರಾಗಬೇಡಿ; ಯಾವಾಗಲು ಇನ್ನಷ್ಟು ತಿಳಿದುಕೊಳ್ಳಲು ಪ್ರಯತ್ನಿಸಿರಿ.

- ಲೆಕ್ಷನರಿಯನ್ನು ಉಪಯೋಗಿಸಿರಿ: ಈ ಲೆಕ್ಷನರಿಯನ್ನು ಪ್ರಾರ್ಥನೆಯೊಂದಿಗೆ ಜಾಗರೂಕತೆಯಿಂದ

ಸಿದ್ಧಪಡಿಸಲಾಗಿದೆ. ಇದರಲ್ಲಿರುವ ವಾಕ್ಯಭಾಗಗಳು ಮತ್ತು ಧ್ಯಯಗಳು ಕ್ರಿಸ್ತನನ್ನು ಸೂಚಿಸುತ್ತವೆ ಮತ್ತು ಪವಿತ್ರ ಸಭೆಯ ನಂಬಿಕೆ ಮತ್ತು ಸಂಪ್ರದಾಯದಲ್ಲಿ ನಂಬಿಗಸ್ತರು ಬೆಳೆಯಲು ಸಹಾಯಮಾಡುತ್ತದೆ. ಹಾಗಾಗಿ ಅದನ್ನು ಶ್ರದ್ಧೆಯಿಂದ ಅನುಸರಿಸಿರಿ.

ನನ್ನ ಪ್ರಿಯರೇ, ಯೆಸು ತನ್ನ ಮಹಾಯಾಜಕತ್ವದ ಪ್ರಾರ್ಥನೆಯಲ್ಲಿ, "ಕರ್ತನೇ, ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು; ನಿನ್ನ ವಾಕ್ಯವೇ ಸತ್ಯವು (ಯೋಹಾನ 17:17–19) ಎಂದು ಹೇಳಿದನು – ಮತ್ತು ಈ ಲೋಕದಲ್ಲಿ ನಮ್ಮ ಗುರಿ ಇದೇ ಆಗಿದೆ: ಪಶ್ಚಾತ್ತಾಪದ ಹಾದಿಯಲ್ಲಿ ದೃಡವಾಗಿ ಉಳಿಯುವುದು, ಪರಿಪೂರ್ಣರಾಗುವುದು ಮತ್ತು ದೇವರಂತೆ ಆಗುವುದೇ ಆಗಿದೆ. ಈ ಲೋಕದ ಶೋಧನೆಗಳನ್ನು ಮತ್ತು ಮಾದರಿಗಳನ್ನು ನಾವು ಹೆಚ್ಚಾಗಿ ಅರಿತುಕೊಳ್ಳುವುದಕ್ಕಿಂತ ಬಲವಾಗಿರುತ್ತವೆ, ಮತ್ತು ಎಚ್ಚರಿಕೆ ನೀಡದೆ, ಅವು ನಮ್ಮನ್ನು ದೇವರಿಂದ ಮತ್ತು ಆತನ ಪವಿತ್ರ ಸಭೆಯಿಂದ ದೂರ ಎಳೆಯಬಹುದು. ಅದಕ್ಕಾಗಿಯೇ ಅಪೋಸ್ತಲನಾದ ಪೌಲನು ನಮಗೆ ಎಚ್ಚರಿಕೆ ನೀಡುತ್ತಾನೆ: "ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ" (ರೋಮಾ 12:2). ನಾವು ಇದನ್ನು ಸ್ವಂತವಾಗಿ ಮಾಡಲು ಸಾಧ್ಯವಿಲ್ಲ; ಬದಲಿಗೆ ನಮಗೆ ಸಹಾಯ ಬೇಕು. ಚರ್ಚ್ ಫಾದರ್‌ಗಳು ಸಹಾಯವನ್ನು ಒದಗಿಸಿದ ಒಂದು ಮಾರ್ಗವೆಂದರೆ ಅದು ಚರ್ಚ್ ಕ್ಯಾಲೆಂಡರ್ ಮೂಲಕವೇ – ಮುಂಬರುವ ದೇವರ ರಾಜ್ಯದ ಮೇಲೆ ನಮ್ಮ ಕಣ್ಣುಗಳನ್ನು ದೃಡವಾಗಿ ಕೇಂದ್ರಿಕರಿಸಲು ಇದು ಒಂದು ಮಾರ್ಗದರ್ಶಿ ಆಗಿದೆ.

✠ ಪರಿಶುದ್ಧ ತ್ರೈಯೇಕ ದೇವರಾದ – ತಂದೆ, ಮಗ ಮತ್ತು ಪವಿತ್ರಾತ್ಮನು ತಾನೆ – ನಿಮ್ಮ ಹೃದಯ ಮತ್ತು ಮನಸ್ಸನ್ನು ಬೆಳಗಿಸಲಿ, ದೇವರ ಜ್ಞಾನದಲ್ಲಿ ಬೆಳೆಯಲು ನಿಮ್ಮ ಕಣ್ಣುಗಳನ್ನು ತೆರೆಯಲಿ, ಮತ್ತು ಪವಿತ್ರ ಥಿಯೋಟೊಕೋಸ್ ಮತ್ತು ಎಲ್ಲಾ ಸಂತರ ಮಧ್ಯಸಿಕೆಯ ಮೂಲಕ, ಪವಿತ್ರ ಸಭೆಯೂ ಅನಾದಿ ಕಾಲದಿಂದಲೂ ಸ್ಥಾಪಿಸಿದ ಮಾದರಿಯ ಪ್ರಕಾರ, ಈಗ ಮತ್ತು ಯಾವಾಗಲೂ ಬದುಕಲು ನಮಗೆ ಅವಕಾಶ ನೀಡಲಿ. ✠ಆಮೆನ್

ಕ್ರಿಸ್ತನಲ್ಲಿ ನಿಮ್ಮ ಆಧ್ಯಾತ್ಮಿಕ ತಂದೆ

**ಮೋರನ್ ಮೊರ್ ಸಾಮುವೇಲ್ ಥಿಯೋಫಿಲಸ್ ಮೆಟ್ರೋಪಾಲಿಟನ್**✠

**ದಿನಾಂಕ :** 2 ಅಕ್ಟೋಬರ್

**ಸ್ಥಳ :** ವಿಶ್ವ ಸಭೆಯ ಪ್ರಧಾನ ಕಛೇರಿ

---

**ವಿಶೇಷ ಸೂಚನೆ:** ದಯವಿಟ್ಟು ಇದನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲಾಗಿದೆ ಮತ್ತು ವಿಶ್ವಾಸಿಗಳ ಪ್ರೋತ್ಸಾಹಕ್ಕಾಗಿ ಎಲ್ಲಾ ಸಭೆಗಳಲ್ಲಿ ಓದಲಾಗೆದೆಯೆ ಎಂದು ಖಚಿತಪಡಿಸಿಕೊಳ್ಳಿರಿ.